**ಕರ್ನಾಟಕ ವಿಧಾನ ಪರಿಷತ್ತು**

**ಲಘು ಪ್ರಕಟಣೆ ಭಾಗ - 2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ:10ನೇ ನವೆಂಬರ್, 2017**

**ಸಂಖ್ಯೆ:** 37

ಕರ್ನಾಟಕ ನೌಕಾನೆಲೆ, ಕಾರವಾರ ಅದರ ಮುಖ್ಯಾಧಿಕಾರಿಗಳು ಬರೆದಿರುವ ಪತ್ರದಲ್ಲಿ ದೇಶದ ರಕ್ಷಣಾ ಇಲಾಖೆಯ ಕಮ್ಯಾಂಡರ್ಸ್‌ಗಳ ಸಂಯುಕ್ತ ಸಭೆಯಲ್ಲಿ ಸಂಸತ್ ಸದಸ್ಯರು/ಶಾಸಕರು/ರಾಜ್ಯ ಸರ್ಕಾರಿ ಅಧಿಕಾರಿಗಳಿಗೆ Familiarisation Sea Sortie ಕಾರ್ಯಕ್ರಮವನ್ನು ಏರ್ಪಡಿಸುವಂತೆ ಮಾನ್ಯ ಪ್ರಧಾನ ಮಂತ್ರಿಗಳು ಸೂಚಿಸಿರುತ್ತಾರೆಂದು ತಿಳಿಸಿ, ಕಾರವಾರದಲ್ಲಿರುವ ಭಾರತೀಯ ಯುದ್ಧ ನೌಕೆಗಳನ್ನು ಹಾಗೂ ಅದರ ಕಾರ್ಯ ವ್ಯವಸ್ಥೆಗಳನ್ನು ಕರ್ನಾಟಕದ ಮಾನ್ಯ ಶಾಸಕರು ವೀಕ್ಷಿಸಲು ವ್ಯವಸ್ಥೆ ಮಾಡುವಂತೆ ಕೋರಿರುತ್ತಾರೆ.

ಅದರಂತೆ, ಕಾರವಾರ ನೌಕಾನೆಲೆಗೆ ದಿನಾಂಕ:18.11.2017ರಂದು ಬೆಳಗ್ಗೆ ಬೆಳಗಾವಿಯಿಂದ ವೋಲ್ವೋ ಬಸ್ ಮೂಲಕ ಪ್ರಯಾಣಿಸಿ ನೌಕಾನೆಲೆಗೆ ಭೇಟಿ ನೀಡಿ ನಂತರ ಅಂದು ಸಂಜೆಯೇ ಕಾರವಾರದಿಂದ ಬೆಳಗಾವಿಗೆ ಹಿಂತಿರುಗಲು ವ್ಯವಸ್ಥೆ ಮಾಡಲಾಗಿರುತ್ತದೆ.

**ಉದ್ದೇಶಿತ ಕಾರ್ಯಕ್ರಮ ಈ ಕೆಳಕಂಡಂತಿರುತ್ತದೆ.**

**18.11.2017 (Saturday)**

| | | |
|---|---|---|
| Departure | 6.30 hrs. | Belgaum(Suvarna Vidhana Soudha) |
| Arrival | 9.30 hrs. | Naval Base Karwar |
| | 9.30 to 10.00 hrs. | Board Indian Naval Warship (Refreshments will be served) |
| | 10.30 hrs. to 15.30 hrs. | Sailing on board warship. Fueling at sea, Search and Rescue operations, Flying operations, Boarding operations, Low Intensity Maritime operations and close Range Anti-Aircraft Gun firing will be demonstrated during sailing (Lunch onboard navalship at sea) |

| | | |
|---|---|---|
| | 16.00 hrs. to 17.00 hrs. | Visit Air craft Carrier at naval base Karwar (Subject to availability) |
| Departure | 17.0 0 hrs. | Naval Base |
| Arrival | 19.30 hrs. | Belgaum |

ಈ ಭೇಟಿಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ಈ ಕೆಳಕಂಡ ಅಂಶಗಳನ್ನು ಗಮನಿಸಬೇಕಾಗಿ ಕೋರಿದೆ.

1. ತಮ್ಮ ಗುರುತಿನ ಚೀಟಿ ತಪ್ಪದೇ ತರುವುದು.
2. ಪುರುಷ ಸದಸ್ಯರು ಕಡ್ಡಾಯವಾಗಿ ಪ್ಯಾಂಟ್, ಶರ್ಟ್, ಜಾರದಂತಹ ಶೂ/ಚಪ್ಪಲಿ ಧರಿಸುವುದು ಹಾಗೂ ಸನ್ ಗ್ಲಾಸ್(ತಂಪು ಕನ್ನಡಕ) ಹೊಂದಿರಬೇಕು.
3. ಮಹಿಳಾ ಸದಸ್ಯರು ಕಡ್ಡಾಯವಾಗಿ ಸಲ್ವಾರ್ ಕಮೀಜ್, ಜಾರದಂತಹ ಶೂ/ಚಪ್ಪಲಿ ಧರಿಸುವುದು ಹಾಗೂ ಸನ್ ಗ್ಲಾಸ್(ತಂಪು ಕನ್ನಡಕ) ಹೊಂದಿರಬೇಕು.

ಭೇಟಿ ನೀಡುವ ಸ್ಥಳವು ಅತ್ಯಂತ ಸೂಕ್ಷ್ಮ ರಕ್ಷಣಾ ವಲಯವಾಗಿರುವುದರಿಂದ ಮಾನ್ಯ ಸದಸ್ಯರನ್ನು ಹೊರತುಪಡಿಸಿ ಇತರರಿಗೆ (ಕುಟುಂಬಸ್ಥರು, ಆಪ್ತ ಸಹಾಯಕರುಗಳು, ಅಂಗರಕ್ಷಕರನ್ನು ಒಳಗೊಂಡಂತೆ) ಪ್ರವೇಶಾವಕಾಶ ಇರುವುದಿಲ್ಲ.

ಕಾರವಾರದ ನೌಕಾ ನೆಲೆಗೆ ಭೇಟಿ ನೀಡಲಿಚ್ಛಿಸುವ ಮಾನ್ಯ ಸದಸ್ಯರುಗಳು ಲಿಖಿತ ಒಪ್ಪಿಗೆಯನ್ನು **ದಿನಾಂಕ:13.11.2017ರೊಳಗಾಗಿ** (ವಾಹನ ಹಾಗೂ ಉಪಾಹಾರದ ವ್ಯವಸ್ಥೆಯನ್ನು ಮಾಡಬೇಕಾಗಿರುವುದರಿಂದ) ತಪ್ಪದೇ ವಿಧಾನ ಪರಿಷತ್ತಿನ ಶಾಸನಾ ರಚನಾ ಶಾಖೆ, ಕೊಠಡಿ ಸಂಖ್ಯೆ:104, ಸುವರ್ಣ ವಿಧಾನ ಸೌಧ, ಬೆಳಗಾವಿ ಇಲ್ಲಿಗೆ ಕಳುಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ(ಪ್ರ).

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**